# ರಾಣಿ ನೇಮಿಸಿದ ಕೊನೆಯ ಪ್ರಧಾನಿ

■ ಪ್ರವೀಣ ಕುಲಕರ್ಣಿ



ಇಂಗ್ಲೆಂಡ್‌ನ ಪ್ರಧಾನಿಯಾಗಿ ಆಯ್ಕೆಯಾಗಿರುವ ಮೇರಿ ಎಲಿಜಬೆತ್ (ಲಿಜ್) ಟ್ರಾಸ್‌ಗೆ ಈಗಷ್ಟೇ 47ರ ಹರೆಯ. ಭಾರತದಲ್ಲಿ ಆಗಿದ್ದರೆ ಇಷ್ಟು ಸಣ್ಣ ವಯಸ್ಸಿನಲ್ಲಿ ಆಕೆ ಆ ದೊಡ್ಡ ಹುದ್ದೆಗೇರುವ ಕನಸು ಕಾಣಲೂ ಸಾಧ್ಯವಿರಲಿಲ್ಲ. ಆದರೆ, ಅವರೀಗ ಇಂಗ್ಲೆಂಡ್‌ನ ಜನರ ಕನಸು ನನಸು ಮಾಡುವ ಹೊಣೆ ಹೊತ್ತು ಪ್ರಧಾನಿ ಹುದ್ದೆಯಲ್ಲಿ ಕುಳಿತಿದ್ದಾರೆ. ಪ್ರಧಾನಿ ಹುದ್ದೆಗೆ ನಡೆದ ಚುನಾವಣೆಯಲ್ಲಿ ಭಾರತೀಯ ಮೂಲದ ರಿಷಿ ಸುನಕ್ ಅವರೇ ಗೆಲ್ಲಲಿದ್ದಾರೆ ಎಂದು ಆರಂಭದಿಂದಲೂ ಹೇಳುತ್ತಾ ಬರಲಾಗುತ್ತಿತ್ತು. ಏಕೆಂದರೆ, ಅವರೇ ಕನ್ಸರ್ವೇಟಿವ್ ಪಕ್ಷದ ಸಂಸದರ ಫೇವರಿಟ್ ಆಗಿದ್ದರು. ಆದರೆ, ಗಣಿತ ಶಿಕ್ಷಕನ ಪುತ್ರಿಯಾದ ಲಿಜ್ ಎಲ್ಲ ಲೆಕ್ಕಾಚಾರಗಳನ್ನೂ ತಲೆಕೆಳಗೆ ಮಾಡಿ ‘ನಂ. 10, ಡೌನಿಂಗ್ ಸ್ಟ್ರೀಟ್’ನ (ಇಂಗ್ಲೆಂಡ್ ಪ್ರಧಾನಿಯವರ ಅಧಿಕೃತ ನಿವಾಸ) ಮುಖ್ಯಸ್ಥೆಯಾಗಿ ಬಂದರು.

ಇಂಗ್ಲೆಂಡ್‌ನ ಮೂರನೇ ಮಹಿಳಾ ಪ್ರಧಾನಿ ಎನಿಸಿದ್ದಾರೆ ಲಿಜ್. ಮಾರ್ಗರೇಟ್ ಥ್ಯಾಚರ್ ಮತ್ತು ತೆರೆಸಾ ಮೇ ಈ ಹಿಂದೆ ಅಲ್ಲಿನ ಪ್ರಧಾನಿಯಾಗಿದ್ದ ಮಹಿಳೆಯರು. ಬೋರಿಸ್ ಜಾನ್ಸನ್ ಈ ಹಿಂದೆ ಪ್ರಧಾನಿಯಾಗಿದ್ದಾಗ ಲಿಜ್ ವಿದೇಶಾಂಗ ಕಾರ್ಯದರ್ಶಿಯಾಗಿದ್ದರು. ಪ್ರಧಾನಿ ಹುದ್ದೆಗೇರುವಂತಹ ಚರಿಸ್ಮಾ ಹೊಂದಿದ ನಾಯಕಿಯಾಗಿ ಅವರೆಂದೂ ಕಂಗೊಳಿಸಿರಲಿಲ್ಲ. ಇಂಗ್ಲೆಂಡ್‌ನ ಹಲವು ಪ್ರದೇಶಗಳ ಪಾಲಿಗೆ ಅವರು ಅಷ್ಟಾಗಿ ಪರಿಚಿತರಾಗಿರಲಿಲ್ಲ. ಹಾಗೆ ನೋಡಿದರೆ ಲಿಜ್ ರಾಜಕೀಯ ಹಿನ್ನೆಲೆ ಹೊಂದಿದ ಕುಟುಂಬಕ್ಕೆ ಸೇರಿದವರೂ ಅಲ್ಲ. ಥ್ಯಾಚರ್ ಅವರ ಅಣ್ವಸ್ತ್ರ ನೀತಿ ವಿರೋಧಿಸಿ ಲಿಜ್ ಅವರ ತಂದೆ–ತಾಯಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರೂ, ಯಾವುದೇ ರಾಜಕೀಯ ನಿಲುವುಗಳನ್ನು ಅವರ ಕುಟುಂಬ ಹೊಂದಿರಲಿಲ್ಲ.

ಲಿಜ್, ಶಾಲಾ ವಿದ್ಯಾರ್ಥಿನಿ ಆಗಿದ್ದಾಗ ಅವರ ಶಾಲೆಯಲ್ಲಿ ಅಣಕು ಚುನಾವಣೆಯನ್ನು ಏರ್ಪಡಿಸಲಾಗಿತ್ತು. ಆಗ ಅಭ್ಯರ್ಥಿ ಥ್ಯಾಚರ್ ಆಗಿ ಅವರು ಸ್ಪರ್ಧಿಸಿದ್ದರು. ಆ ಚುನಾವಣೆಯಲ್ಲಿ ಆಕೆ ಸೋಲು ಕಂಡರೂ ಥ್ಯಾಚರ್ ಆಗಿ ಅಭಿನಯಿಸುವ ಅವಕಾಶ ಸಿಕ್ಕಿದ್ದಕ್ಕೆ ಖುಷಿಪಟ್ಟಿದ್ದರು. ಮುಂದೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ, ರಾಜಕೀಯಶಾಸ್ತ್ರ ಮತ್ತು ಅರ್ಥಶಾಸ್ತ್ರ ವಿಷಯಗಳನ್ನು ಓದಿದ ಲಿಜ್, ‘ಕ್ಯಾಂಪಸ್ ರಾಜಕೀಯ’ದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಅಲ್ಲಿ ಓದುತ್ತಿರುವಾಗಲೇ ಕನ್ಸರ್ವೇಟಿವ್ ಪಕ್ಷದ ಜತೆ ಗುರ್ತಿಸಿಕೊಂಡವರು. ಶೆಲ್ ಕಂಪನಿಯಲ್ಲಿ ಕೆಲಕಾಲ ಅಕೌಂಟೆಂಟ್ ಆಗಿ ಕೆಲಸ ಮಾಡಿದ ಅವರು, ಬಳಿಕ ರಾಜಕೀಯವನ್ನೇ ವೃತ್ತಿಯಾಗಿ ಸ್ವೀಕರಿಸಿದರು.

ಲಿಜ್, 2021ರಲ್ಲಿ ಸಂಸದೆಯಾಗಿ ಮೊದಲ ಬಾರಿಗೆ ಆಯ್ಕೆಯಾಗಿದ್ದರು. ಮೊದಲು ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿದ್ದ ಅವರು, ಪರಿಸರ ಕಾರ್ಯದರ್ಶಿಯಾಗಿ ಬಡ್ತಿ ಹೊಂದಿದ್ದರು. ಮೊದಮೊದಲು ಬ್ರೆಕ್ಸಿಟ್ ವಿರುದ್ಧವಾಗಿದ್ದ ಅವರು, ‘ಯೂರೋಪ್ ಒಕ್ಕೂಟದಿಂದ ಒಂದುವೇಳೆ ಇಂಗ್ಲೆಂಡ್ ಹೊರಬಂದರೆ ಅದೊಂದು ಬಹುದೊಡ್ಡ ದುರಂತವಾಗಿ ಪರಿಣಮಿಸಲಿದೆ’ ಎಂದಿದ್ದರು. ದೇಶ ಬ್ರೆಕ್ಸಿಟ್ ಪರವಾಗಿ ಮತ ಚಲಾಯಿಸಿದ ಮೇಲೆ, ‘ಇನ್ನುಮುಂದೆ ಇಂಗ್ಲೆಂಡ್‌ನ ಕಾರ್ಯವಿಧಾನವೇ ಬದಲಾಗಿದೆ’ ಎಂದು ಎಚ್ಚರಿಕೆಯಿಂದ ಪ್ರತಿಕ್ರಿಯಿಸಿದ್ದರು.

‘ಯಾವುದೇ ಹೊಸ ತೆರಿಗೆಯನ್ನು ವಿಧಿಸುವುದಿಲ್ಲ, ಕಾರ್ಪೊರೇಟ್ ತೆರಿಗೆಯನ್ನು ಶೇ. 19ರಿಂದ ಶೇ. 25ಕ್ಕೆ ಏರಿಸುವ ಪ್ರಸ್ತಾವವನ್ನು ಕೈಬಿಡಲಾಗುವುದು’ ಎಂಬ ಲಿಜ್ ಅವರ ಭರವಸೆ ಅವರಿಗೆ ಹೆಚ್ಚಿನ ಬೆಂಬಲವನ್ನು ಗಳಿಸಿಕೊಟ್ಟಿತು ಎಂದು ವಿಶ್ಲೇಷಿಸಲಾಗುತ್ತಿದೆ. ಏಕೆಂದರೆ, ಪಕ್ಷದ ಬಹುತೇಕ ಸದಸ್ಯರ ಬೇಡಿಕೆ ಅದೇ ಆಗಿತ್ತು. ಪ್ರಧಾನಿ ಅಭ್ಯರ್ಥಿ ಆಯ್ಕೆಯಲ್ಲಿ ಮತದಾನದ ಹಕ್ಕು ಹೊಂದಿದ ಆ ಸದಸ್ಯರು, ತಮ್ಮ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ ಈ ನಾಯಕಿಯ ಪರವಾಗಿ ನಿಂತರು. ಕನ್ಸರ್ವೇಟಿವ್ ಪಕ್ಷದ ಬಲಪಂಥೀಯ ವಿಚಾರಧಾರೆಗಳ ಪ್ರಬಲ ಪ್ರತಿಪಾದಕಿಯಾಗಿಯೂ ಲಿಜ್ ಅವರನ್ನು ಗುರ್ತಿಸಲಾಗುತ್ತಿದೆ. ತೃತೀಯ ಲಿಂಗಿಗಳಿಗೆ ಎಲ್ಲ ಹಕ್ಕುಗಳನ್ನು ಮುಕ್ತವಾಗಿ ನೀಡಬಾರದು ಎಂದು ಹೇಳುತ್ತಾರೆ. ಸಹೋದ್ಯೋಗಿಯಾಗಿದ್ದ ಅಕೌಂಟಂಟ್ ಹಗ್ ಒ’ಲೇರಿ ಅವರನ್ನು ಮದುವೆಯಾದರೂ ‘ರಾಜಕೀಯ ಗುರು’ ಮಾರ್ಕ್ ಫೀಲ್ಡ್ ಜತೆಗೂ ಅವರು ಸಂಬಂಧ ಹೊಂದಿದ್ದರು. ತಾವಿಬ್ಬರೂ ಸಂಬಂಧ ಹೊಂದಿರುವುದನ್ನು ಫೀಲ್ಡ್ ಒಪ್ಪಿಕೊಂಡಿದ್ದರು ಕೂಡ. ಲಿಜ್‌ಗೆ ಇಬ್ಬರು ಪುತ್ರಿಯರಿದ್ದಾರೆ.

ಸುದೀರ್ಘ ಏಳು ದಶಕಗಳ ಕಾಲ ಇಂಗ್ಲೆಂಡ್‌ನ ಅಧಿನಾಯಕಿಯಾಗಿದ್ದ ರಾಣಿ ಎಲಿಜಬೆತ್–II, ಕಳೆದ ವಾರ ಕೊನೆಯುಸಿರು ಎಳೆಯುವ ಮುನ್ನ ಇಂಗ್ಲೆಂಡ್‌ನ ನೂತನ ಪ್ರಧಾನಿಯನ್ನಾಗಿ ಲಿಜ್ ಅವರನ್ನು ನೇಮಕ ಮಾಡಿದ್ದರು. ರಾಣಿಯ ಕೊನೆಯ ಸರ್ಕಾರಿ ಕಾರ್ಯಕ್ರಮ ಅದಾಗಿತ್ತು. ರಾಣಿ ಎಲಿಜಬೆತ್–II ಅವರು ಕಂಡ ಹದಿನೈದು ಪ್ರಧಾನಿಗಳಲ್ಲಿ ಕೊನೆಯವರಾಗಿ ಲಿಜ್ ಚರಿತ್ರೆ ಪುಟಗಳಲ್ಲಿ ದಾಖಲಾಗಿದ್ದಾರೆ. ಕೋವಿಡ್‌ನಿಂದ ತೀವ್ರವಾಗಿ ಕಂಗೆಟ್ಟಿರುವ ಗ್ರೇಟ್ ಬ್ರಿಟನ್‌ನ ಜನ ಪುಟ್ಟ ಕಣ್ಣುಗಳನ್ನು ಪಿಳಿಪಿಳಿ ಬಿಟ್ಟುಕೊಂಡು ಲಿಜ್ ಅವರ ಕಡೆಗೆ ದೃಷ್ಟಿ ನೆಟ್ಟಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65